


ಅರಿಯದೇ ಉಳಿದ ಜನ ಯಾಂತ್ರಿಕವಾಗಿ ಅವರನ್ನೇ ಅನುಸರಿಸಿದರು.

ಮಾಬಳೇಶ ಒಂದು ಬಂಡಲ್ ಊದಿನಕಡ್ಡಿಗೆ ಒಮ್ಮೆಲೇ ಬೆಂಕಿ ಹಚ್ಚಿ ಹಿಲಾಲಿನಂತೆ ಅದನ್ನೆತ್ತಿ ಎಡಕ್ಕೊಮ್ಮೆ ಬಲಕ್ಕೊಮ್ಮೆ ತಿರುಗಿ ಸುತ್ತೂಕಡೆ ನೋಡಿ ಅದನ್ನು ಒಲೆಯ ನೆತ್ತಿಯೊಳಗೆ ತುರುಕಿದ. ಒಲೆಯಿನ್ನೂ ಹಸಿ ಇದ್ದಿದ್ದರಿಂದ ತಕರಾರಿಲ್ಲದೇ ಅವುಗಳನ್ನು ಹಿಡಿದಿಟ್ಟುಕೊಂಡಿತು. ಮಾಬೂ ತಲೆಯ ಮೇಲೆ ಮಣೆ, ಮಣೆಯ ಮೇಲೆ ಒಲೆಯನ್ನಿಟ್ಟುಕೊಂಡು ಬರಿಗಾಲಿನಲ್ಲಿ ಅಲ್ಲಿಂದ ಪಾದ ಬೆಳೆಸಿದ. ಅಲ್ಲಿದ್ದ ಒಂದಿಷ್ಟು ಜನರು ಇವನೊಂದಿಗೆ ಸೇರಿಕೊಂಡರು. ಯಾರೋ ಒಬ್ಬಾತ ಮೈಕಿನಲ್ಲಿ ಭಕ್ತಿಪರಂಪರೆಯ ಬಗ್ಗೆ ಹೇಳುತ್ತಿದ್ದ: ಅಂದು ತನ್ನ ಸೋದರಿಯ ರೊಟ್ಟಿಗಾಗಿ ಬೆನ್ನನ್ನೇ ಕಾವಲಿಯಾಗಿಸಿಕೊಂಡ ಸಂತ ಜ್ಞಾನೇಶ್ವರಾ, ಇಂದು ಭಾರತದ ಸೋದರಿಯರಿಗಾಗಿ ತನ್ನ ತಲೆಯನ್ನೇ ಒಲೆಯಾಗಿಸಿಕೊಂಡ ಮಾಬಳೇಶ್ವರಾ. ಒಂದೊಂದು ಓಣಿಗೂ ಒಂದೊಂದಿಷ್ಟು ಹುಡುಗರು ಸೇರಿಕೊಳ್ಳುತ್ತಿದ್ದಂತೆ ಅವನ ಎದೆ ಉಬ್ಬಿದಂತೆನ್ನಿಸುತ್ತಿತ್ತು. ಜೈಕಾರದಿಂದ ವಿಚಿತ್ರ ಆವೇಶ ಮೈದುಂಬಿ ಅಂತರದಲ್ಲಿ ನಡೆಯುತ್ತಿರುವಂತೆ ಭಾಸವಾಯಿತು. ಸ್ವರ್ಗ ಎಂದರೆ ಇದೇ ಇರಬೇಕೆಂದು ಹರ್ಷೋನ್ಮಾದದಲ್ಲಿ ತೇಲತೊಡಗಿದ.

ಸಂಜೆ ಆವರಿಸುತ್ತಿದ್ದಂತೆ ಜೊತೆಗಾರರೆಲ್ಲ ತಂತಮ್ಮ ಮನೆಬಂದಂತೆ ಹೊರಟುಹೋದರು. ಒಂದಿಬ್ಬರು ಇವನೊಂದಿಗೆ ಅರಳೀಕಟ್ಟೆಯ ತನಕ ಬಂದು, ಒಲೆ ಪ್ರತಿಷ್ಠಾಪಿಸಲು ಸಹಾಯ ಮಾಡಿ ಮರಳಿದರು. ಪಕ್ಕದಲ್ಲಿ ಖಾಲೀ ಬಿಂದಿಗೆಯ ಬಾಯಿಗೆ ಬಟ್ಟೆ ಕಟ್ಟಿ, ಅದಕ್ಕೊಂದು ತೂತು ಕೊರೆದು ಹುಂಡಿಯನ್ನಾಗಿಸಿ ಸುಮ್ಮನೇ ಕುಳಿತ. ಮರದ ಪೊಟರೆಯೊಳಗಿಂದ ಗುಕ್ ಗುಕ್ ಶಬ್ದ. ಗೂಬೆಗಳು